**ಚಾಸಾಃ 3 ಫ್ರಾಸಾಃ 3**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ**

**ಸಿಸಿ ಸಂಖ್ಯೆ: 986/2021**

| | | |
|---|---|---|
| ಹೆಸರು | : | ಪ್ರಶಾಂತ |
| ತಂದೆಯ ಹೆಸರು | : | ಸಂಜೀವ |
| ಫ್ರಾಯ | : | 45 ವರ್ಷ |
| ಉದ್ಯೋಗ | : | ಚಾಲಕ |
| ವಾಸ | : | ನಡ ಗ್ರಾಮ, ಬೆಳ್ತಂಗಡಿ ತಾಲೂಕು |

**ದಿನಾಂಕ 29.07.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ

ಸಾಕ್ಷಿಗೆ ನಿಪಿ1 ನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಗಳನ್ನು ನಿಪಿ-1(ಇ) ಮತ್ತು ನಿಪಿ1(ಎಫ್) ಎಂದು ಗುರುತಿಸಲಾಯಿತು. ನಿಪಿ1 ಕ್ಕೆ ಪೊಲೀಸ್ ಠಾಣೆಯಲ್ಲಿ ಪಾಸ್ ಪೋರ್ಟ್ ಗೆಂದು ಹೋದಾಗ ಸಹಿ ಮಾಡಿದ್ದೇನೆ, ಯಾವಾಗ ಎಂದು ನೆನಪಿಲ್ಲ. ನಿಪಿ1 ರಲ್ಲಿ ಬರೆದಿರುವ ವಿಚಾರಗಳನ್ನು ತಿಳಿದುಕೊಂಡಿರುವುದಿಲ್ಲ. ನನ್ನ ಸಮಕ್ಷಮದಲ್ಲಿ ಯಾವುದೇ ಸ್ವತ್ತುಗಳನ್ನು ಸ್ವಾಧೀನಪಡಿಸಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ನನಗೆ ಇರುವುದಿಲ್ಲ. ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸ.ಸ.ಅ ರವರಿಂದಃ**

ದಿಃ 9.6.2021 ರಂದು ಚಾಸಾ2 ರವರ ಮೋಟಾರು ಸೈಕಲ್ ನಲ್ಲಿ ನಾನು ಮತ್ತು ಚಾಸಾ2 ರವರು ಬೆಳ್ತಂಗಡಿಯ ಮೆಡಿಕಲ್ ಶಾಪ್ ನಿಂದ ಔಷಧಿ ತರಲು ಹೋಗುತ್ತಿರುವಾಗ ಮಧ್ಯಾಹ್ನ 2.45 ಗಂಟೆಗೆ ಮಂಜೊಟ್ಟಿ ತಲುಪಿದ್ದೆ ಎಂದರೆ ಸರಿಯಲ್ಲ. ಹಾಗೆ ಸ್ಥಳ ತಲುಪಿದಾಗ ಚಾಸಾ1 ಹಾಗೂ ಚಾಸಾ4 ರಿಂದ 7 ರವರು ಇದ್ದರು ಎಂದರೆ ಸರಿಯಲ್ಲ. ಆಗ ಚಾಸಾ1 ರವರು ನಡ ಗ್ರಾಮದ ನಡಬೈಲು ಗುಡ್ಡೆಯಲ್ಲಿ ಗಡಾಯಿಕಲ್ಲು ಹತ್ತಿರ ಕೆಲವು ಜನರು ಹಣವನ್ನು ಪಣವಾಗಿಟ್ಟು ಕೋಳಿಯಂಕ ಎಂದು ಜೂಜಾಟವನ್ನು ಆಡುತ್ತಿದ್ದಾರೆ, ತಡವಾದರೆ ಅವರು ಓಡಿಹೋಗುವ ಸಾಧ್ಯತೆ ಇದೆ ಆದ್ದರಿಂದ ನಮ್ಮನ್ನು ಪಂಚರಾಗಿ ಸಹಕರಿಸಬೇಕೆಂದು ವಿನಂತಿಸಿದ್ದರು ಎಂದರೆ ಸರಿಯಲ್ಲ. ಅದಕ್ಕೆ ಒಪ್ಪಿ ನಾವು ಮೋಟಾರು ಸೈಕಲ್ ನಲ್ಲಿ ಪೊಲೀಸರ ಜೊತೆ ಹೊರಟಿರುತ್ತೇವೆ ಎಂದರೆ ಸರಿಯಲ್ಲ. ಹಾಗೆ ಹೋಗುತ್ತಿರಲು ನಡ ಗ್ರಾಮದ ನಡಬೈಲು ಎಂಬಲ್ಲಿ ತಲುಪಿದಾಗ ಜೀಪನ್ನು ಕಾಂಕ್ರೀಟ್ ರಸ್ತೆ ಬದಿ ನಿಲ್ಲಿಸಿ ಅಲ್ಲಿಂದ ಸುಮಾರು 75 ಮೀ ದೂರ ಕಾಡು ಪ್ರದೇಶದಲ್ಲಿ ನಡೆದುಕೊಂಡು ಹೋಗಿ ಅವಿತು ನೋಡಿದಾಗ ಕಾಡು ಪ್ರದೇಶದ ಮಧ್ಯೆ ಖಾಲಿ ಜಾಗದಲ್ಲಿ ಸುಮಾರು ಜನರು ಸುತ್ತುವರೆದು ನಿಂತು ಇಬ್ಬರು ಕೋಳಿಗಳನ್ನು ಕೈಯಲ್ಲಿ ಹಿಡಿದುಕೊಂಡು ಕೋಳಿಯಂಕಕ್ಕೆ ಬಿಡುತ್ತಾ ಸುತ್ತುವರೆದು ನಿಂತವರು ಪರಸ್ಪರ ಹಣವನ್ನು ಕಟ್ಟುತ್ತಿದ್ದು ಆ ಸಮಯದಲ್ಲಿ ಯಾರೂ ಸಹ ಮಾಸ್ಕನ್ನು ಧರಿಸದೇ ಸಾಮಾಜಿಕ ಅಂತರವನ್ನು ಸಹ ಕಾಪಾಡಿಲ್ಲ ಎಂದರೆ ಸರಿಯಲ್ಲ. ಹಣವನ್ನು ಪಣವಾಗಿ ಕಟ್ಟಿ ಕೋಳಿಯಂಕ ಎಂಬ ಆಟವನ್ನು ಆಡುವುದು ಕಂಡುಬಂದಿರುವುದು ಖಚಿತವಾಗಿದ್ದು, ಮಧ್ಯಾಹ್ನ ಸುಮಾರು 3 ಗಂಟೆ ವೇಳೆಗೆ ಪೊಲೀಸರು ಸುತ್ತುವರೆಯಲು ಪ್ರಯತ್ನಿಸಿದಾಗ ನಮ್ಮನ್ನು ನೋಡುತ್ತಾ ಅಲ್ಲಿದ್ದವರು ಬಾಳು ಕಟ್ಟಿದ ಕೋಳಿ ಸಮೇತ ಓಡಿ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದರು ಎಂದರೆ ಸರಿಯಲ್ಲ. ಪೊಲೀಸರು ಅವರನ್ನು ಹಿಡಿಯಲು ಹೋದಾಗ ಕಾಡಿನಲ್ಲಿ ಎಲ್ಲರೂ ತಪ್ಪಿಸಿಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಒಬ್ಬರನ್ನು ಚಾಸಾ1 ರವರ ಮುಂದೆ ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಆ ವ್ಯಕ್ತಿಯನ್ನು ವಿಚಾರಿಸಿದಾಗ ಆತ 1 ನೇ ಆರೋಪಿಯಾಗಿದ್ದ ಎಂದರೆ ಸರಿಯಲ್ಲ. ಓಡಿಹೋದವರ ಬಗ್ಗೆ ಕೇಳಿದಾರೆ ಅವರು 2 ರಿಂದ 10 ನೇ ಆರೋಪಿತರು ಆಗಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿ ಹಣವನ್ನು ಪಣವಾಗಿ ಕಟ್ಟಿ ಕೋಳಿಯಂಕ ಎಂಬ ಜೂಜಾಟ ಆಡಲು ಒಪ್ಪಿರುತ್ತಾರೆ ಎಂದರೆ ಸರಿಯಲ್ಲ. ಕೋಳಿಯಂಕ ಆಡಲು ಸಂಬಂಧಪಟ್ಟ ಪ್ರಾಧಿಕಾರದಿಂದ ಪರವಾನಿಗೆ ಬಗ್ಗೆ ವಿಚಾರಿಸಿದಾಗ ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿಸಿದ್ದರು ಎಂದರೆ ಸರಿಯಲ್ಲ. ಕೋಳಿಯಂಕಕ್ಕೆ

ಉಪಯೋಗಿಸಿದ ವಿವಿಧ ಜಾತಿಯ 5 ಕೋಳಿಗಳು, ಎರಡು ನೂಲುಗಳು, 1 ನೇ ಆರೋಪಿ ಕೋಳಿಯಂಕಕ್ಕೆ ಪಣವಾಗಿ ಕಟ್ಟಿ ಆತನ ಸ್ವಾದೀನದಲ್ಲಿ ರೂ. 2,100/- ಗಳನ್ನು ಮುಂದಿನ ಕ್ರಮಕ್ಕಾಗಿ ನಿಪಿ1 ರಂತೆ ಮಹಜರ್ ಮುಖೇನ ಸ್ವಾದೀನಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ವೆಂಕಟೇಶ್ ಎಂಬ ಪೊಲೀಸರು ಇಲಾಖಾ ಲಾಪ್ ಟಾಪ್ ಮೂಲಕ ಮಹಜರ್ ನ್ನು ಬೆರಳಚ್ಚು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸ್ಥಳದಲ್ಲಿಯೇ ಮಹಜರ್ ಗೆ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ಮಹಜರ್ ಗೆ ಸ್ಥಳದಲ್ಲಿ ಸಹಿ ಮಾಡಿದ್ದರೂ ಪಾಸ್ ಪೋರ್ಟ್ ವಿಚಾರಕ್ಕೆ ಪೊಲೀಸ್ ಠಾಣೆಗೆ ಹೋದಾಗ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ದಾಖಲೆಗೆ ಸಹಿ ಮಾಡುವ ಪೂರ್ವದಲ್ಲಿ ಅದನ್ನು ಓದಿ ಸಹಿ ಮಾಡಬೇಕೆಂಬ ಸಾಮಾನ್ಯ ಪರಿಜ್ಞಾನ ಇದೆಯಾ ಎಂದರೆ ಸಾಕ್ಷಿ ಅವರು ಹೇಳಿದ ಕಾರಣ ನಾನು ಮಾಡಿದ್ದೇನೆ ಎಂದು ಹೇಳುತ್ತಾರೆ. ಮಹಜರ್ ಗೆ ತಕ್ಷೀರು ಸ್ಥಳದಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಪೊಲೀಸರು ದಿಃ 10.6.2021 ರಂದು ಈ ಮೇಲಿನಂತೆ ನನ್ನ ಹೇಳಿಕೆ ಪಡೆದಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಾನು ಮೇಲ್ಕಂಡ ವಿಳಾಸದಲ್ಲಿ ---- ನೋಡಿದರೆ ಗುರುತಿಸುತ್ತೇನೆ ಎಂಬ ಹೇಳಿಕೆಯನ್ನು ಓದಿ ಹೇಳಿ ಕೇಳಲಾಗಿ ಸಾಕ್ಷಿ ನಿರಾಕರಿಸಿದ ಮೇರೆಗೆ ಹೇಳಿಕೆಯನ್ನು ನಿಪಿ- 4 ಎಂದು ಗುರುತಿಸಲಾಯಿತು. ಅಲ್ಲದೆ ಪೊಲೀಸರು ಮು.ಮಾ1 ರಿಂದ 3 ನ್ನು ನನ್ನ ಸಮಕ್ಷಮ ಸ್ವಾದೀನಪಡಿಸಿದ್ದಾರೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ ಇರುವುದಿಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
(ಸಾ.ಓ.ಹೇ.ಕೇ.ಸ.ಇ.ಎ.ಒ) ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ